# ಕರ್ನಾಟಕ ಲೋಕಾಯುಕ್ತ

ಸಂಖ್ಯೆ : ಕಂಪ್ಲಂಟ್/ಉಪಲೋಕ್/ಎಂವೈಎಸ್/9529/2018/ಡಿಆರ್‌ಇ-2. ಬಹು ಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಭೇಡ್ಕರ್ ವೀಧಿ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 24.01.2020.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1) ರ ಅನ್ವಯ ವರದಿ

ವಿಷಯ: ದೂರುದಾರ ಶ್ರೀ **ಡಿ. ಕೇಶವ್ ನಾಯ್ಕ್,** ಕನ್‌ವಿನರ್, ಎಸ್.ಎಸ್‌ಟಿ ಕಮಿಟಿ ತರಿಗುಪ್ಪೆ ಹೌಸ್, ಸಿಕ್ಕಮದನೂರು ಗ್ರಾಮ, ಮುತ್ತೂರು ತಾಲ್ಲೂಕು ರವರು (1) **ಶ್ರೀ ಅನಂತಕುಮಾರ್.ಬಿ,** ತಹಶೀಲ್ದಾರ್, ಮುತ್ತೂರು ಮತ್ತು **(2) ಶ್ರೀಮತಿ ರೂಪಾ ಶೆಟ್ಟಿ,** ನಗರಸಭೆ ಆಯುಕ್ತರು, ಮುತ್ತರು ರವರುಗಳ ವಿರುದ್ಧ ಸಲ್ಲಿಸಿದ ದೂರಿನನ್ವಯ ದೂರುದಾರರು ಆಪಾದಿಸಿರುವಂತೆ ಎದುರುದಾರರು ಹಾಜರ್‌ಪಡಿಸಿರುವ ನಕ್ಷೆಯಲ್ಲಿ ಹಳದಿ ಬಣ್ಣದಲ್ಲಿ ತೋರಿಸಿರುವ ರಸ್ತೆಯಲ್ಲಿ ಕಟ್ಟಿರುವ 2 ಪಂಚಾಂಗಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ತಮ್ಮ ಮನೆ ಮತ್ತು ನಿವೇಶನಗಳಿಗೆ ಓಡಾಡಲು ಸಂಪರ್ಕ ರಸ್ತೆ ಕಲ್ಪಿಸಿಕೊಡುವ ಕುರಿತು.

**********

ಶ್ರೀ **ಡಿ. ಕೇಶವ್ ನಾಯ್ಕ್,** ಕನ್‌ವಿನರ್, ಎಸ್.ಎಸ್‌ಟಿ ಕಮಿಟಿ ತರಿಗುಪ್ಪೆ ಹೌಸ್, ಸಿಕ್ಕಮದನೂರು ಗ್ರಾಮ, ಮುತ್ತೂರು ತಾಲ್ಲೂಕು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) **ಶ್ರೀ ಅನಂತಕುಮಾರ್.ಬಿ,** ತಹಶೀಲ್ದಾರ್, ಮುತ್ತೂರು ಮತ್ತು **(2) ಶ್ರೀಮತಿ ರೂಪಾ ಶೆಟ್ಟಿ,** ನಗರಸಭೆ ಆಯುಕ್ತರು, ಮುತ್ತರು (ಇನ್ನು ಮುಂದೆ "ಎದುರುದಾರರು-1 ಮತ್ತು 2" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಆಪಾದಿಸಿ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ.

2. ದೂರುದಾರರಾದ ಶ್ರೀ **ಡಿ. ಕೇಶವ್ ನಾಯ್ಕ್,** ಕನ್‌ವಿನರ್, ಎಸ್.ಎಸ್‌ಟಿ ಕಮಿಟಿ ತರಿಗುಪ್ಪೆ ಹೌಸ್, ಸಿಕ್ಕಮದನೂರು ಗ್ರಾಮ, ಮುತ್ತೂರು ತಾಲ್ಲೂಕು ರವರು (1) **ಶ್ರೀ ಅನಂತಕುಮಾರ್.ಬಿ,** ತಹಶೀಲ್ದಾರ್,

ಪುತ್ತೂರು ಮತ್ತು **(2) ಶ್ರೀಮತಿ ರೂಪಾ ಶೆಟ್ಟಿ,** ನಗರಸಭೆ ಆಯುಕ್ತರು, ಪುತ್ತರು ರವರುಗಳ ವಿರುದ್ಧ ಆಪಾದಿಸಿ ಈ ಕಛೇರಿಗೆ ದೂರು ಸಲ್ಲಿಸಿರುತ್ತಾರೆ.

3. ದೂರುದಾರರು ತಮ್ಮ ದೂರಿನಲ್ಲಿ ಪುತ್ತಗೂರು ತಾಲ್ಲೂಕು ಸಾಮೆತಡ್ಕ ಎಂಬಲ್ಲಿ 1972–73 ರಲ್ಲಿ ಪರಿಶಿಷ್ಟ ಜಾತಿ–ಪಂಗಡಗಳಿಗೆ ಸ.ನಂ. 337 ರಲ್ಲಿ ತಲಾ 10 ಸೆಂಟ್ಸ್‌ನ ನಿವೇಶನಗಳನ್ನು ವಿಗಡಿಸಲಾಗಿತ್ತು. ಆ ಸಮಯದಲ್ಲಿ ನಕ್ಷೆಯಲ್ಲಿ ತಿಳಿಸಿದಂತೆ ರಸ್ತೆ ವ್ಯವಸ್ಥೆಯನ್ನು ತೋರಿಸಲಾಗಿತ್ತು. ಕಾಲಕ್ರಮೇಣ ದಾರಿಯ ಜಾಗವನ್ನು ಅತಿಕ್ರಮಣ ಮಾಡಿದ್ದರಿಂದ ರಸ್ತೆ ಇಲ್ಲದಂತಾಗಿದೆ. ಕಾರಣ ಸರ್ಕಾರದ ಜಾಗದಲ್ಲಿ ದಾರಿ ಮಾಡಿಕೊಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ, ಸದರಿ ಜಾಗದಲ್ಲಿ ದಾರಿ ಮಾಡಿಕೊಡಬೇಕೆಂದು ಕೋರಿರುತ್ತಾರೆ.

4. ದೂರಿನ ಜೊತೆಗೆ ದಿನಾಂಕ 01.04.2016 ರಂದು ಜಿಲ್ಲಾಧಿಕಾರಿಗಳಿಗೆ ದಾರಿಮಾಡಿಕೊಡಲು ಕೋರಿ ಸಲ್ಲಿಸಿದ ಅರ್ಜಿಯ ಪ್ರತಿ ಸ.ನಂ. 337/1 ರಲ್ಲಿ ವಿಂಗಡಿಸಿದ ನಿವೇಶನಗಳ ಅಸ್ಪಷ್ಟವಾದ ನಕ್ಷೆಯ ಪ್ರತಿಯನ್ನು ಹಾಜರು ಮಾಡಿರುತ್ತಾರೆ.

5. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಾಮೆತಡ್ಕ ಎಂಬಲ್ಲಿ 1972–73 ರಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ ಸ.ನಂ. 337 ರಲ್ಲಿ ತಲಾ 10 ಸೆಂಟ್ಸ್‌ನ ನಿವೇಶನಗಳನ್ನು ವಿಂಗಡಿಸಲಾಗಿತ್ತು. ದೂರುದಾರರ ದೂರಿನ ಮೇರೆಗೆ ದಿನಾಂಕ 02.11.2018 ರಂದು ಸ್ಥಳ ತನಿಖೆ ಮಾಡಿದಾಗ ಪುತ್ತೂರು 'ಕಸಬಾ ಸ.ನಂ. 337/1ಎ1ಎ1ಎ ರಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ ವಿಂಗಡಿಸಲಾದ ನಿವೇಶನಗಳಲ್ಲಿ ಮೋಜಣಿದಾರರು ಅಳತೆ ಮಾಡಿದಾಗ ನಕ್ಷೆಯಲ್ಲಿ ತೋರಿಸಿದಂತೆ ರಸ್ತೆ ಇರುವುದಿಲ್ಲ. ಸದರಿ ರಸ್ತೆಯ ಜಾಗದಲ್ಲಿ ಮನೆಯನ್ನು ಕಟ್ಟಿದ್ದು, ಮನೆಯ ಮುಂಭಾಗದಲ್ಲಿ ರಸ್ತೆಗೆ ಜಾಗವನ್ನು ಬಿಟ್ಟಿರುತ್ತಾರೆ. ಹಾಲಿ ಇರುವ ರಸ್ತೆಗಳು ಪ್ಲಾಟಿಂಗ್ ಆದ ಸ್ಥಳವಾಗಿರುತ್ತದೆ. ದೂರುದಾರರು ದೂರಿನಲ್ಲಿ ರಸ್ತೆ ಕೋರಿರುವ ಜಾಗವನ್ನು ಹಳದಿ ಬಣ್ಣದಲ್ಲಿ ಗುರ್ತಿಸಿದ್ದು, ಸದರಿ ಜಾಗದಲ್ಲಿ ಎರಡು ತಳಪಾಯ (ಪಂಚಾಂಗ) ಹಾಕಲಾಗಿದೆ ಎಂದು ತಿಳಿಸಿರುತ್ತಾರೆ.

6. 1ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದಿನಾಂಕ 02.11.2018 ರಂದು ಸ್ಥಳ ತನಿಖೆ ಮಾಡಿದಾಗ ಪುತ್ತೂರು ಕಸಬಾ ಸ.ನಂ. 337/1ಎ1ಎ1ಎ ರಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ ವಿಂಗಡಿಸಲಾದ ನಿವೇಶನಗಳಲ್ಲಿ ಯೋಜಣೆದಾರರು ಅಳತೆ ಮಾಡಿದಾಗ ನಕ್ಷೆಯಲ್ಲಿ ತೋರಿಸಿದಂತೆ ರಸ್ತೆ ಇರುವುದಿಲ್ಲ. ಸದರಿ ರಸ್ತೆಯ ಜಾಗದಲ್ಲಿ ಮನೆಯನ್ನು ಕಟ್ಟಿದ್ದು, ಮನೆಯ ಮುಂಭಾಗದಲ್ಲಿ ರಸ್ತೆಗೆ ಜಾಗವನ್ನು ಬಿಟ್ಟಿರುತ್ತಾರೆ. ಹಾಲಿ ಇರುವ ರಸ್ತೆಗಳು ಪ್ಲಾಟಿಂಗ್ ಆದ ಸ್ಥಳವಾಗಿರುತ್ತದೆ. ದೂರುದಾರರು ದೂರಿನಲ್ಲಿ ರಸ್ತೆ ಕೋರಿರುವ ಜಾಗವನ್ನು ಹಳದಿ ಬಣ್ಣದಲ್ಲಿ ಗುರ್ತಿಸಿದ್ದು, ಸದರಿ ಜಾಗದಲ್ಲಿ ಎರಡು ತಳಪಾಯ (ಪಂಚಾಂಗ) ಹಾಕಲಾಗಿದೆ ಎಂದು ತಿಳಿಸಿರುತ್ತಾರೆ.

7. ದಿನಾಂಕ 25.02.2019 ರಂದು ದೂರುದಾರರಿಗೆ ಪ್ರತ್ಯುತ್ತರ ಸಲ್ಲಿಸಲು ಕಳುಹಿಸಿದ ನೋಟಿಸ್ ಮೇಲೆ ಲೋಕಾಯುಕ್ತ ಪೋಲೀಸರು ದೂರುದಾರರು ಮರಣ ಹೊಂದಿರುತ್ತಾರೆಂದು ಹಿಂಬರಹ ಹಾಕಿ ದೂರುದಾರರ ಮರಣ ಪ್ರಮಾಣ ಪತ್ರವನ್ನು ಹಾಜರ್ ಪಡಿಸಿರುತ್ತಾರೆ. ಸದರಿ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಿದಾಗ ದೂರುದಾರರಾದ ಶ್ರೀ ಕೇಶವ್ ನಾಯ್ಕ್ ರವರು ದಿನಾಂಕ 06.08.2018 ರಂದು ಮರಣ ಹೊಂದಿರುತ್ತಾರೆಂದು ಕಂಡು ಬರುತ್ತದೆ.

8. ದೂರುದಾರರು ದಿನಾಂಕ 06.08.2018 ರಂದು ಮೃತಪಟ್ಟಿರುತ್ತಾರೆಂದು ಶ್ರೀ ರವೀಶ್‌ರವರು ಪತ್ರ ಬರೆದು ಅದರಲ್ಲಿ ತಹಶೀಲ್ದಾರ್ ಕಛೇರಿಯ ಭೂಮಾಪಕರಾದ ಶ್ರೀ ದಿವಾಕರ್ ಮತ್ತು ಪುತ್ತೂರು ನಗರಸಭೆಯ ಇಂಜೀನಿಯರ್ ಶ್ರೀಧರ್ ನಾಯ್ಕರ್ ಎಂಬುವರು ದಿನಾಂಕ 29.07.2019 ರಂದು ಜೊತೆಯಾಗಿ ಬಂದು ಸ್ಥಳ ತನಿಖೆ ನಡೆಸಿರುತ್ತಾರೆ ಹಾಗೂ ಮುಖ್ಯಾಧಿಕಾರಿ ಮತ್ತು ತಹಶೀಲ್ದಾರ್ ರವರಿಗೆ ವರದಿ ನೀಡಿ ಪರಿಶಿಷ್ಟರ ಮನೆಗಳಿಗೆ ಹೋಗುವ ಮಾರ್ಗ ಮಾಡುವ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಆದ್ದರಿಂದ, ಅತಿಕ್ರಮಣವನ್ನು ತೆಗೆಸಿ ನಿವೇಶನ–ಮನೆಗಳ ಸಂಪರ್ಕಕ್ಕಾಗಿ ಮಾರ್ಗ ಮಾಡಿಕೊಡುವಂತೆ ಕಂದಾಯ ಇಲಾಖೆಗೆ ಆದೇಶಿಸಬೇಕಾಗಿ ಕೋರಿದ್ದಾರೆ.

9. ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ, 1972–73 ರಲ್ಲಿ ಹಲವಾರು10 ಸೆಂಟ್ಸ್ ಅಳತೆಯ ಸೈಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿಂಗಡಿಸಲಾಗಿತ್ತು. ಸದರಿ ಸೈಟ್ ವಿತರಣೆ ಮಾಡುವಾಗ ತೋರಿಸಿದ ನಕ್ಷೆಯ ದಾರಿಯಲ್ಲಿ ಅತಿಕ್ರಮಣವಾಗಿದೆ, ಅದರೆ, ಸದರಿ ಅತಿಕ್ರಮಣ ಯಾರು ಮಾಡಿದ್ದಾರೆ, ಎಷ್ಟು ವರ್ಷಗಳಿಂದ ಹಿಂದೆ ಈ ರೀತಿ ಅತಿಕ್ರಮಣವಾಗಿದೆ ಎನ್ನುವ ಬಗ್ಗೆ ಉಭಯ ಪಕ್ಷದವರು ಉಲ್ಲೇಖಿಸಿಲ್ಲ. ಈ ದೂರು ದಾಖಲಾದ ನಂತರ ಎದುರುದಾರರ ಇಲಾಖೆಯವರು ಸ್ಥಳ ತನಿಖೆ ಮಾಡಿದ್ದಾರೆ ಎಂಬುದನ್ನು ದೂರುದಾರರ ಪರವಾಗಿರೋ ಶ್ರೀ ರವೀಶ್ ರವರು ಒಪ್ಪಿಕೊಂಡಿದ್ದಾರೆ.

10. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ/ವರದಿ, ನಕ್ಷೆ ಪರಿಶೀಲಿಸಿದಾಗ ದೂರುದಾರರ ಆಪಾದನೆಯಂತೆ, ಪುತ್ತೂರು ಕಸಬಾ ಸ.ನಂ. 337/1ಎ1ಎ1ಎ ರಲ್ಲಿ ಪರಿಶಿಷ್ಟ ಜಾತಿ–ಪಂಗಡಗಳಿಗೆ ವಿತರಿಸಲಾದ ಸೈಟುಗಳಲ್ಲಿ ಬಿಟ್ಟಿದ್ದ ರಸ್ತೆ ಅತಿಕ್ರಮಣವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಎದುರುದಾರರು ಹಾಜರ್‌ಪಡಿಸಿರುವ ನಕ್ಷೆಯಲ್ಲಿ ತೋರಿಸಿರುವ ಹಳದಿ ಬಣ್ಣದ ಸ್ಥಳದಲ್ಲಿ ಎರಡು ತಳಪಾಯ (ಪಂಚಾಂಗ) ಹಾಕಲಾಗಿದೆ ಎಂಬುದು ಕಂಡು ಬರುತ್ತದೆ. ಪರಿಶಿಷ್ಟ ಜಾತಿ–ಪಂಗಡಗಳಿಗೆ ಸೈಟುಗಳನ್ನು ನೀಡುವುದಷ್ಟೆಲ್ಲ ಸದರಿ ಸೈಟುಗಳಿಗೆ ಸಂಪರ್ಕ ರಸ್ತೆಯನ್ನು ಸಹಿತ ಒದಗಿಸುವುದು ಎದುರುದಾರರ ಕರ್ತವ್ಯವಾಗಿರುತ್ತದೆ. ರಸ್ತೆಗಾಗಿ ಬಿಟ್ಟಿದ್ದ ಜಾಗ ಅತಿಕ್ರಮಣವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುವುದರಿಂದ ದೂರುದಾರರು ಕೋರುತ್ತಿರುವ ಸ್ಥಳದಲ್ಲಿಯೇ ಸಾರ್ವಜನಿಕರ ಉಪಯೋಗಕ್ಕಾಗಿ ರಸ್ತೆ ನಿರ್ಮಾಣ ಮಾಡುವುದು ಎದುರುದಾರರ ಕರ್ತವ್ಯವಾಗಿದ್ದರೂ ಸಹಿತ ಅವರು ತಮ್ಮ ಆಕ್ಷೇಪಣೆಗಳಲ್ಲಿ ತಾವು ಸದರಿ ಸ್ಥಳದಲ್ಲಿ ಸಾರ್ವಜನಿಕ ಸಂಪರ್ಕ ರಸ್ತೆ ಮಾಡುವುದಾಗಿ ತಿಳಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ಸಕ್ಷಮ ಪ್ರಾಧಿಕಾರದವರಿಗೆ ಪುತ್ತೂರು ಕಸಬಾ ಸ.ನಂ. 337/1ಎ1ಎ1ಎ ರಲ್ಲಿ ಎದುರುದಾರರು ಹಾಜರ್‌ಪಡಿಸಿರುವ ನಕ್ಷೆಯಲ್ಲಿ ಎರಡು ತಳಪಾಯ (ಪಂಚಾಂಗ) ನಿರ್ಮಿಸಲಾಗಿರುತ್ತದೆ ಎಂದು ಹೇಳಿರುವ ತಳಪಾಯ (ಪಂಚಾಂಗ) ಗಳನ್ನು ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ಕಾನೂನುಬದ್ಧವಾಗಿ ತೆರವುಗೊಳಿಸಿ ರಸ್ತೆ ಮಾಡುವಂತೆ ನಿರ್ದೇಶಿಸುವುದು ಸಮಂಜಸವಾಗುತ್ತದೆ.

11. ಆದ್ದರಿಂದ, ಪುತ್ತೂರು ಕಸಬಾ ಸ.ನಂ. 337/1ಎ1ಎ1ಎ ರಲ್ಲಿ ಎದುರುದಾರರು ಹಾಜರ್‌ಪಡಿಸಿರುವ ನಕ್ಷೆಯಲ್ಲಿ ಎರಡು ತಳಪಾಯ (ಪಂಚಾಂಗ) ನಿರ್ಮಿಸಲಾಗಿರುತ್ತದೆ ಎಂದು ಹೇಳಿರುವ ತಳಪಾಯ (ಪಂಚಾಂಗ) ಗಳನ್ನು ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ನಿಯಮಾನುಸಾರ ತೆರವುಗೊಳಿಸಿ ರಸ್ತೆ ಮಾಡುವಂತೆ ಸೂಕ್ತ ಕ್ರಮಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12 (2) ರ ಪ್ರಕಾರ ಸಕ್ಷಮ ಪ್ರಾಧಿಕಾರದವರು ಈ ವರದಿಯ ಮೇಲೆ ಏನು ಕ್ರಮಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

27-1-20

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ)**
ಗೌರವಾನ್ವಿತ ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.